# ಡಾ. ಆರ್. ಬಿ. ಗದ್ದಗಿಮಠ

ಡಾ. ಆರ್. ಬಿ. ಗದ್ದಗಿಮಠರವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗು ಶಿಕ್ಷಣ ಕ್ಷೇತ್ರದಲ್ಲಿ ೩೧ ವರ್ಷಗಳ ಸುದೀರ್ಘ ಸೇವೆಯನ್ನು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಗುಲ್ಬರ್ಗಾ ವಿಶ್ವವಿದ್ಯಾಲಯ, NAARM ಹೈದ್ರಾಬಾದ್, ಕಬ್ಬುತಳಿ ಸಂಶೋಧನಾ ಕೇಂದ್ರ, ಕೊಯಮತ್ತೂರ್ ಹಾಗು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಆಚಾರ್ಯ ವಿದ್ಯಾಸಂಸ್ಥೆಗಳಲ್ಲಿ Dean- LRAS ಹುದ್ದೆಯಲ್ಲಿ ಸೇವೆಸಲ್ಲಿಸುತ್ತಿರುತ್ತಾರೆ.

ಡಾ. ಗದ್ದಗಿಮಠರವರು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ICT), ಶೈಕ್ಷಣಿಕ ತಂತ್ರಜ್ಞಾನ, ಶೈಕ್ಷಣಿಕ ಅಬಿವೃದ್ಧಿ, ಸಂವಹನ ಕೌಶಲ್ಯತೆ ಮುಂತಾದ ಉದಯೋನ್ಮುಖ ವಿಷಯಗಳಲ್ಲಿ ನೈಪುಣ್ಯತೆಯನ್ನು ಪಡೆದಿದ್ದಾರೆ. ಇವರು ಗ್ರಂಥಾಲಯ ವಿಜ್ಞಾನದ ತತ್ವ ಮತ್ತು ಸಿದ್ಧಾಂತಗಳ ತಳಪಾಯದ ಮೇಲೆ ಆಧುನಿಕ ತಂತ್ರಜ್ಞಾನಗಳ ಸ್ಪರ್ಶವನ್ನು ಹತ್ತಾರು ಗ್ರಂಥಾಲಯಗಳಿಗೆ ಅಳವಡಿಸಿ, ಗ್ರಂಥಾಲಯಗಳ ಬೆಳನಣಿಗೆಯಲ್ಲಿ ತಮ್ಮದೇ ಆದ ಮಹತ್ವದ ಪಾತ್ರವನ್ನು ನಿರೂಪಿಸಿದ್ದಾರೆ. ತಮ್ಮ ಸೇವೆಯ ಉದ್ದಕ್ಕು, ಶೈಕ್ಷಣಿಕ ಪ್ರಗತಿಗಳಲ್ಲಿ ಮತ್ತು ಸಾಮಾಜಿಕ ಅಬಿವೃದ್ಧಿಗಳಲ್ಲಿ ತೊಡಗಿಸಿಕೊಂಡಿರುವರು. ಗ್ರಂಥಾಲಯಗಳ ಅಬಿವೃದ್ಧಿ ಗ್ರಂಥಪಾಲಕರ ಸವಾಲುಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡಿರುವ ಆರುನೂರಕ್ಕು ಹೆಚ್ಚು ಗ್ರಂಥಪಾಲಕರುಗಳನ್ನು ಸುಸಜ್ಜಿತವಾಗಿ ತರಬೇತಿಗೊಳಿಸಿ, ನಾವಿಣ್ಯ ಹಾಗೂ ಆಧುನಿಕ ಗ್ರಂಥಾಲಯ ಸೇವೆಗಳನ್ನು ಓದುಗರಿಗೆ ತಲುಪುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಡಾ. ಗದ್ದಗಿಮಠರವರು ತಮ್ಮ ಸೇವಾ ಅವಧಿಯಲ್ಲಿ ಹಲವಾರು ಪ್ರಮುಖ ದೇಶಗಳಾದ ಅಮೇರಿಕಾ, ಇಂಗ್ಲೆಂಡ್, ಬೆಲ್ಜಿಯಂ, ಫ್ರಾನ್ಸ್ ಹಾಗು ಕೆನಡಾ ದೇಶಗಳಿಗೆ ಬೇಟಿ ನೀಡಿ ಶೈಕ್ಷಣಿಕ ನಿಯೋಜನೆ ಒಪ್ಪಂದ ಹಾಗೂ ಸಂಶೋದನ ಸಂಯೋಜನೆಗಳನ್ನು ಧೃಡಿಕರಿಸಿ ಅಲ್ಲಿನ ತಂತ್ರಗಾರಿಕೆಗಳನ್ನು ಅರ್ಥಮಾಡಿಕೊಂಡು ಹಲವಾರು ಸಂಸ್ಥೆಗಳಲ್ಲಿ ಅಳವಡಿಕೆ ಮಾಡಿಕೊಂಡಿದ್ದಾರೆ. ಇವರು ಫೋರ್ಡ್ ಪೌಂಡೇಶನ್, ICRAF, World Bank, FAO/UNDP ಹಾಗೂ ಇನ್ನಿತರ ದೇಶ-ವಿದೇಶ

ಸಂಘ ಸಂಸ್ಥೆಗಳ ಯೋಜನೆಗಳ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿರುವರು. ಇವರು ಕರ್ನಾಟಕ ಜ್ಞಾನ ಆಯೋಗದಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುವರು.

ಡಾ. ಆರ್. ಬಿ. ಗದ್ದಗಿಮಠರವರು ಖ್ಯಾತ ಜಾನಪದ ಪಿತಾಮಹ ದಿವಂಗತ ಡಾ. ಬಿ. ಎಸ್. ಗದ್ದಗಿಮಠ ಅವರ ಎರಡನೆ ಪುತ್ರರು. ಇವರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸುಧೀರ್ಘ ಸೇವೆಯನ್ನು ಪರಿಗಣಿಸಿ ಹಲವಾರು ಪದವಿ, ಪ್ರಶಸ್ತಿ, ಪುರಸ್ಕಾರಗಳನ್ನು ನೀಡಲಾಗಿದೆ. ಅವುಗಳಲ್ಲಿ Best Librarian "Award, by 'Government of Karnataka, Best University Library Award,' Best ICT Enabled University of the Year, ' Excellent Teacher Award,' Use of Technology in Higher Education Award, ' ಹಾಗೂ Best Technology Enabled Library -LibTech-2019 Award,' ಮುಂತಾದವುಗಳು. ಕರ್ನಾಟಕ ಸರ್ಕಾರ ಇವರನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಮೂರು ವರುಷಗಳ ಅವಧಿಗೆ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ (೨೦೧೯–೨೦೨೨).